ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 113-117
©*IIMRD*, Mysuru
IIMRD JOURNALS
www.iimrd.com

# ಕೃಷ್ಣಾಪುರ ಕೃಷ್ಣ ದೇವಾಲಯದ ಗಾರೆ ಶಿಲ್ಪಗಳು: ಒಂದು ವಿಶ್ಲೇಷಣೆ

**ಕವಿತ[*] ಮತ್ತು ಡಾ. ಆರ್. ಕವಿತ[**]**

[*] ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

[**] ಸಂಶೋಧನಾ ಮಾರ್ಗದರ್ಶಕರು ಮತ್ತು ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು.

***ಸಾರಾಂಶ (Abstract)***

*'ಗಾರೆ ಶಿಲ್ಪಗಳಲ್ಲಿ ಗಾರೆಯನ್ನು ಹೊರತುಪಡಿಸಿದರೆ ಉಳಿದೆಲ್ಲವು ಕೂಡ ಶಿಲಾ ಶಿಲ್ಪಗಳ ಶೈಲಿ ಮತ್ತು ಲಕ್ಷಣಗಳನ್ನು ಕಾಣಬಹುದು. ಸೂಕ್ಷ್ಮವಾಗಿ ಅವಲೋಕಿಸಿದರೆ ಶಿಲಾಶಿಲ್ಪಗಳಿಗಿಂತ ಹೆಚ್ಚು ಸುಂದರವಾಗಿ ಕಾಣುತ್ತವೆ. ಉತ್ತಮ ಲಕ್ಷಣಗಳುಲ್ಲ ಕೆಲವು ಗಾರೆಶಿಲ್ಪಗಳು ಹೊಯ್ಸಳ ಕಾಲದ ಶಿಲಾ ಶಿಲ್ಪಗಳನ್ನು ನೆನಪಿಸುತ್ತವೆ. ಗಾರೆ ನಮ್ಯತೆಯಿಂದ ಕೂಡಿರುವುದರಿಂದ ಶಿಲ್ಪಿಯು ತನ್ನ ಕೌಶಲ್ಯವನ್ನು ಬಳಸಿ ಅತ್ಯಂತ ಮನೋಜ್ಞವಾಗಿ ನಿರ್ಮಿಸುತ್ತಾನೆ. ಗಾರೆಶಿಲ್ಪಗಳು ಉದ್ದವಾಗಿದ್ದು, ತೆಳುವಾಗಿ ಬಳುಕುವ ಲಕ್ಷಣಗಳಿಂದ ಕೂಡಿವೆ. ಆದರೆ ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡ ಗಾರೆಶಿಲ್ಪಗಳು ಉಬ್ಬು ರಚನೆಗಳಾಗಿದ್ದು, ಒರಟುತನದಿಂದ ಕೂಡಿರುತ್ತದೆ. ಈ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಗೂಡುಗಳಲ್ಲಿ (ವೈಷ್ಣವ ಶಿಲ್ಪಗಳು) ಮತ್ತು ಮಹಾದ್ವಾರ ಗೋಪುರದಲ್ಲಿ ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಕೃಷ್ಣಾಪುರದ ಕೃಷ್ಣ ದೇವಾಲಯದ ಗಾರೆ ಶಿಲ್ಪಗಳ ಬಗ್ಗೆ ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು* (Keywords):** ವಿಜಯನಗರ, ಹಂಪಿ, ಕೃಷ್ಣ ದೇವಾಲಯ, ಗಾರೆ ಶಿಲ್ಪಗಳು, ಶಿಲಾ ಶಿಲ್ಪಗಳು.

## ಪೀಠಿಕೆ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೊದಲೇ ಹಂಪಿ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಹೊಯ್ಸಳ ವೀರಬಲ್ಲಾಳ ಮತ್ತು ವಿಜಯನಗರದ ಸಂಗಮ ಮನೆತನದ ಅರಸರ ಆಳ್ವಿಕೆಯಲ್ಲಿ ಚಿಕ್ಕ ಕೇಂದ್ರವಾಗಿದ್ದ ಹಂಪಿ ಮುಂದೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಯಿತು. ಕ್ರಿ. ಶ 1531 ಅ ನಂತರದ ಶಾಸನಗಳಲ್ಲಿ ಹಂಪಿಯನ್ನು ವಿದ್ಯಾನಗರ, ವಿದ್ಯಾನಗರಿ ಎಂದು ಕರೆಯಲಾಗಿದೆ.

ವಿಶಾಲವಾದ ವಿಜಯನಗರವು ವಿರೂಪಾಕ್ಷಪುರ, ಕೃಷ್ಣಾಪುರ, ವಿಠ್ಠಲಾಪುರ, ಅಚ್ಯುತಪುರ, ಕಡ್ಡಿರಾಂಪುರ, ಕಮಲಾಪುರ, ವರದಾದೇವಿ ಅಮ್ಮನ ಪಟ್ಟಣ, ಮಲಪನಗುಡಿ, ಸಾಲೆ ತಿರುಮಲರಾಯನ

Please cite this article as: *ಕವಿತ ; ಆರ್ ಕವಿತ. (2021*). ಕೃಷ್ಣಾಪುರ ಕೃಷ್ಣ ದೇವಾಲಯದ ಗಾರೆ ಶಿಲ್ಪಗಳು: ಒಂದು ವಿಶ್ಲೇಷಣೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 113–117*

ಪಟ್ಟಣ, ನಾಗಲಾದೇವಿಪುರ, ತಿರುಮಲದೇವಿ, ಚಿತ್ತವಾಡಿ ಅಥವಾ ಚಿಕ್ಕವಾಡಿ ಮುಂತಾದ ಪುರ ಮತ್ತು ಪಟ್ಟಣಗಳನ್ನು ಹೊಂದಿತ್ತು. ಪ್ರಸ್ತುತ ಅಧ್ಯಯನದಲ್ಲಿ ಕೃಷ್ಣಾಪುರದಲ್ಲಿರುವ ಕೃಷ್ಣ ದೇವಾಲಯದ ಗಾರೆಶಿಲ್ಪಗಳ ರಚನೆ, ಶೈಲಿ ಮುಂತಾದವುಗಳನ್ನು ಕುರಿತು ಚರ್ಚಿಸಲಾಗಿದೆ.

ವಿಜಯನಗರದ ಪುರಗಳಲ್ಲೇ ವಿರೂಪಾಕ್ಷಪುರ ಮೊದಲನೇಯದು. ನಂತರ ಕೃಷ್ಣಾದೇವರಾಯನ ಕಾಲದಲ್ಲಿ ನಿರ್ಮಾಣಗೊಂಡ ಎರಡನೇ ಪುರ 'ಕೃಷ್ಣಾಪುರ'. ಹಂಪಿಯಲ್ಲಿರುವ ಕೃಷ್ಣದೇವಾಲಯದ ಸುತ್ತಮುತ್ತಲಿನ ಪ್ರದೇಶವೇ ಕೃಷ್ಣಾಪುರ. ಕೃಷ್ಣಾದೇವಾಲಯವು ಹಂಪಿಯ ಪ್ರಮುಖ ದೇವಾಲಯಗಳಲ್ಲೊಂದು. ಈ ದೇವಾಲಯ ಕಮಲಾಪುರದತ್ತ ಹೋಗುವ ದಾರಿಯಲ್ಲಿ ವಿರೂಪಾಕ್ಷ ಬಜಾರಿನ ದಕ್ಷಿಣದಲ್ಲಿದೆ. ಕ್ರಿ.ಶ 1513 ರಿಂದ ಈ ಪ್ರದೇಶಕ್ಕೆ ಕೃಷ್ಣಾಪುರ ಎಂಬ ಹೆಸರು ಬಂದಿದೆ. ಕೃಷ್ಣಾಪುರ ಹಂಪಿಯಲ್ಲಿ ಸ್ಥಾಪನೆಗೊಂಡ ಪ್ರಥಮ ವೈಷ್ಣವಪುರ ವಿರೂಪಾಕ್ಷಪುರಕ್ಕೆ ಸಮಾನಾಂತರವಾಗಿ ಕೃಷ್ಣದೇವರಾಯನ ಕಾಲಕ್ಕೆ ಸ್ಥಾಪಿತವಾದವುಗಳಲ್ಲಿ ಈ ಕೃಷ್ಣಾಪುರ ಮೊದಲಿನದು. ಈ ಪುರದ ಪಾರಂಪರಿಕ ಗಡಿ ಬಲಗಡೆ ಉದ್ದಾನ ವಿರಭದ್ರಾದೇವಾಲಯ ಮತ್ತು ಎಡಗಡೆ ವಿರೂಪಾಕ್ಷ ಬಜಾರ್ ಶಾಸನವೊಂದರ ಪ್ರಕಾರ ಇಂದಿನ ಉದ್ದಾನ ವೀರಭದ್ರ ದೇವಾಲಯ ಈ ಪ್ರದೇಶಕ್ಕೆ ಸೇರಿತ್ತು. ಅಂದು ಆ ದೇವತೆಯ ಹೆಸರು ಮುದ್ದುವೀರಣ್ಣನೆಂಬುದಾಗಿತ್ತು. ಕೃಷ್ಣದೇವರಾಯನ ಕಾಲದವರೆಗೆ ಹೇಮಕೂಟದ ದಕ್ಷಿಣ ಭಾಗದ ಕಾಲುವೆ ಕೂಡ ಕೃಷ್ಣಾಪುರ ಪ್ರದೇಶವಾಗಿತ್ತು. ನಂತರ ಕೃಷ್ಣದೇವರಾಯನು ಮಧ್ಯಭಾಗದಲ್ಲಿ ವಿಷ್ಣು ದೇವಾಲಯವನ್ನು ನಿರ್ಮಿಸಿ ಸುತ್ತಲ ಪ್ರದೇಶವನ್ನು ಪುರವಾಗಿಸಿ ಶ್ರೀ ಬಾಲಕೃಷ್ಣ ವಿಗ್ರಹವನ್ನು ಫೆಬ್ರವರಿ 16, 1515 ಶುಕ್ರವಾರದಂದು ದೇವಾಲಯದ ಈಶಾನ್ಯ ಭಾಗದ ಮಣಿಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಶಾಸನಗಳಲ್ಲಿ ಈ ಕೃಷ್ಣಾ ಬಜಾರನ್ನು ಕೃಷ್ಣಾಪುರ, ಪೇಟೆ, ಬಾಲಕೃಷ್ಣ ದೇವರ ತೇರು ಬೀದಿ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮೋಹನ ತರಂಗಿಣಿ ಯಲ್ಲಿ ಕನಕದಾಸರು ಈ ಪುರವನ್ನು 'ಕೃಷ್ಣನಗರಿ' ಎಂದು ಕರೆದಿದ್ದಾರೆ.

**ಕೃಷ್ಣಾ ದೇವಾಲಯದ ಗಾರೆ ಶಿಲ್ಪಗಳು**

ಹಂಪಿಯ ದೇವಾಲಯಗಳಲ್ಲಿ ಕಂಡುಬರುವ ಗಾರೆಶಿಲ್ಪಗಳನ್ನು ಪ್ರಮುಖವಾಗಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ರಚನೆಗಳು ಎಂಬುದಾಗಿ ವಿಂಗಡಿಸಬಹುದು. ಗಾರೆಶಿಲ್ಪಗಳ ರಚನಾ ಸ್ವರೂಪವೆ ಕಾಲ ವಿಂಗಡಣೆಗೆ ಸಹಾಯಕವಾಗಿದೆ. ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ಗಾರೆಶಿಲ್ಪಗಳು ಬಿಡಿ ಶಿಲ್ಪಗಳಂತೆ ಕಂಡು ಬರುತ್ತವೆ. ಪ್ರತಿಮಾಶಾಸ್ತ್ರದ ಲಕ್ಷಣಗಳನ್ನೊಳಗೊಂಡ ಈ ಶಿಲ್ಪಗಳು ಅಂಗಾಗ ಪ್ರಮಾಣ ಬದ್ಧತೆಯನ್ನು ಕಾಯ್ದುಕೊಂಡಿವೆ. ವಿಶೇಷ ಅಲಂಕಾರಗಳಿಂದ ಕೂಡಿರುವ ಈ ಶಿಲ್ಪಗಳು ನುರಿತ ಶಿಲ್ಪಿಗಳ ಅನುಭವದ ಸಾಕಾರ ಮೂರ್ತಿಗಳಂತೆ ಕಂಡುಬರುತ್ತವೆ. ಸಮಕಾಲೀನ ಲೋಹ, ಶಿಲೆ ಮತ್ತು ಮರದ ಪ್ರತಿಮೆಗಳಿಗೆ, ರಚನೆಯಲ್ಲಿ ಸರಿಸಮನಾಗಿ ನಿಲ್ಲುವ ಸಾಮರ್ಥ್ಯ ಮತ್ತು ಗುಣ ವಿಜಯನಗರ ಕಾಲದ ಗಾರೆಶಿಲ್ಪಗಳಿವೆ. ಗಾರೆಶಿಲ್ಪಗಳನ್ನು ದೇವಾಲಯದ ಗೋಪುರ, ಶಿಖರ ಮತ್ತು ಮಂಟಪಗಳ ಮೇಲಿನ ಕೈಪಿಡಿ ಗೋಡೆಯಲ್ಲಿರುವ ಗೂಡುಗಳಲ್ಲಿ ಕಾಣುತ್ತೇವೆ. ವೈವಿಧ್ಯಮಯವಾದ ಸೌಂದರ್ಯ ಸೃಷ್ಟಿಗಾಗಿ, ವಾಸ್ತು ರಚನೆಗಳ ನಡುವೆ ಗಾರೆಶಿಲ್ಪಗಳನ್ನು ನಿರ್ಮಿಸುವುದರ ಮೂಲಕ ದೇವಾಲಯದ ಅಂದವನ್ನು ಹೆಚ್ಚಿಸಲು

ಗಾರೆ ಶಿಲ್ಪಗಳನ್ನು ರಚಿಸಲಾಗುತಿತ್ತು. ಮಹಾದ್ವಾರ ಗೋಪುರಗಳು ಒಂದು, ಎರಡು ಮತ್ತು ಮೂರಕ್ಕಿಂತಲೂ ಹೆಚ್ಚು ಹಂತಗಳಿಂದ ಕೂಡಿದ್ದು, ಪ್ರತಿಯೊಂದು ಹಂತದಲ್ಲಿಯೂ ಅರ್ಧಕಂಬ ಮತ್ತು ದೇವಕೋಷ್ಠಗಳ ಅಲಂಕಾರಿಕ ರಚನೆಗಳಿಂದ ಕೂಡಿವೆ.

ಕೃಷ್ಣಾ ದೇವಾಲಯವು ಹಂಪಿಯ ಬೃಹತ್ ದೇವಾಲಯಗಳಲ್ಲಿ ಒಂದಾಗಿದ್ದು, ಈ ದೇವಾಲಯದ ಗಾರೆ ಶಿಲ್ಪಾ ರಚನೆಯ ಕೌಶಲ್ಯವು ವಿಜಯನಗರ ಕಾಲದ ವಾಸ್ತುಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ. ಎತ್ತರವಾದ ಆವರಣ ಗೋಡೆಯು ದೇವಾಲಯ ಸಂಕೀರ್ಣವನ್ನು ಸುತ್ತುವರಿದಿದ್ದು; ಈ ಆವರಣದಲ್ಲಿ ಮುಖ್ಯ ಆಲಯ, ದೇವಿಯ ಆಲಯ ಮತ್ತು ಇತರ ಸಣ್ಣ ಗುಡಿಗಳನ್ನು ಕಾಣಬಹುದು. ದೇವಾಲಯ ರಚನೆ ವಿಜಯನಗರ ಶೈಲಿಯ ಯೋಜನೆಯ ಎಲ್ಲಾ ಅಂಶಗಳನ್ನು ವಿಶೇಷವಾಗಿ ಹೊಂದಿದೆ. ಮುಖ್ಯ ದೇವಾಲಯವು ತಳನಕ್ಷೆಯಲ್ಲಿ ತೆರೆದ ಮಹಾಮಂಟಪ, ಅರ್ಧಮಂಟಪ ಮತ್ತು ಮುಚ್ಚಿದ ಪ್ರದಕ್ಷಿಣೆ ಪಥ, ಗರ್ಭಗೃಹ ಹಾಗೂ ಅಂತರಾಳವನ್ನು ಒಟ್ಟಾರೆಯಾಗಿ ಪ್ರದಕ್ಷಿಣೆ ಮಾಡುವಂತೆ ನಿರ್ಮಿಸಲಾಗಿದೆ. ಅರ್ಧಮಂಟಪದಲ್ಲಿ ಕಂಡು ಬರುವ ಒಂದು ಕಂಬದಲ್ಲಿ ದಶಾವತಾರದ ಉಬ್ಬುಶಿಲ್ಪಗಳಿದ್ದು ಅದರಲ್ಲಿ ಅಪರೂಪವೆನಿಸುವ ಕಲ್ಕಿಯ ಉಬ್ಬುಶಿಲ್ಪ ಇದೆ. ಕಲ್ಕಿಯು ಕುದುರೆಯ ಮುಖದೊಂದಿಗೆ ಕುಳಿತು ಭಂಗಿಯಲ್ಲಿ ಕೆತ್ತಿರುವುದು ವಿಶೇಷ.

ಅಂತರಾಳ ಮತ್ತು ಗರ್ಭಗುಡಿಯ ಭಿತ್ತಿಯ ಹೊರಭಾಗವನ್ನು ಗಾರೆಯಿಂದ ಅತ್ಯಂತ ಕಲಾತ್ಮಕವಾಗಿ ರೂಪಿಸಲಾಗಿದೆ. ಅಲ್ಲದೆ ಅತ್ಯುತ್ತಮವಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲೆ ಮೂರು ತಲದ ವೃತ್ತಾಕಾರದ ಶಿಖರವಿದ್ದು ಅಪಾರವಾಗಿ ಹಾನಿಗೊಂಡಿದೆ. ಹೊಂದಿದೆ. ದೇವಾಲಯದ ವಾಯುವ್ಯ ಭಾಗದಲ್ಲಿ ಶಾಲ ಶಿಖರವಿರುವ ದೇವಿಯ ದೇವಾಲಯವಿದೆ.

ಶ್ರೀಕೃಷ್ಣ ದೇವಾಲಯ ಸಂಕೀರ್ಣವು ಅದು ಹೊಂದಿರುವ ಉಪ ದೇವಾಲಯಗಳ ಪ್ರಭೇದಗಳು ಮತ್ತು ಸಂಖ್ಯೆಗಳು ವಿಶೇಷವಾಗಿ ಗಮನ ಸೆಳೆಯುತ್ತದೆ. ಇವುಗಳಲ್ಲಿ ದಕ್ಷಿಣ ಭಾಗದಲ್ಲಿರುವ ಸುಬ್ರಹ್ಮಣ್ಯ ದೇವಾಲಯ ಪ್ರಮುಖವಾದುದು. ಶ್ರೀಕೃಷ್ಣನ ಆಲಯದಲ್ಲಿ ಇದು ಅಪರೂಪ ಹಾಗೂ ವಿಶೇಷವಾಗಿ ಕಂಡು ಬರುವ ರಚನೆ ಇದರಲ್ಲಿ ಗಾರೆಯಿಂದ ನಿರ್ಮಿಸಿದ ನವಿಲಿನ ಮೇಲೆ ಕುಳಿತ ಸುಬ್ರಹ್ಮಣ್ಯನ ವಿಗ್ರಹ ಗಮನ ಸೆಳೆಯುತ್ತದೆ.

ಈ ದೇವಾಲಯ ಸಂಕೀರ್ಣಕ್ಕೆ ಉತ್ತರ ಮತ್ತು ದಕ್ಷಿಣಗಳಲ್ಲಿ ಗೋಪುರ ಪ್ರವೇಶದ್ವಾರಗಳಿವೆ. ಆದರೆ ಪೂರ್ವದ ಗೋಪುರದ ಕೆಲವು ಭಾಗ ಮಾತ್ರ ಇಂದು ಉಳಿದುಕೊಂಡು ಬಂದಿದೆ. ಗೋಪುರದ ಪಶ್ಚಿಮ ಮುಖದಲ್ಲಿ ಗಾರೆಯ ಹಲವಾರು ಶಿಲ್ಪಗಳು ಇಂದಿಗೂ ಉಳಿದಿವೆ. ಅವುಗಳಲ್ಲಿ ಶಸ್ತ್ರಾಧಾರಿ ಸೈನಿಕರು ಭಾವಾವೇಶಕ್ಕೆ ಒಳಗಾದ ಕುದುರೆ ಹಾಗೂ ಆನೆಗಳ ಶಿಲ್ಪಗಳಿವೆ. ಪ್ರಾಯಶಃ ಕೃಷ್ಣದೇವರಾಯನ ಒರಿಸ್ಸಾ ದಂಡಯಾತ್ರೆಯ ಸನ್ನಿವೇಶಗಳನ್ನು ಇವು ಪ್ರತಿನಿಧಿಸುತ್ತದೆ.

ಎರಡು ಪ್ರಾಕಾರಗಳ ನಡುವೆ ದಕ್ಷಿಣ ದಿಕ್ಕಿನಲ್ಲಿ ವೃತ್ತಾಕಾರದ ಗುಮ್ಮಟ ಮಾದರಿಯ ಭಾವಣಿಯನ್ನು ಹೊಂದಿದ ಕಣಜವನ್ನು ಹಾಸು ಕಲ್ಲು ಬಂಡೆಯ ಮೇಲೆ ರಚಿಸಲಾಗಿದೆ. ಇದು ಆರು ಕೊಠಡಿಗಳನ್ನು ಹೊಂದಿದ್ದು ಅತ್ಯಂತ ಸದೃಢವಾಗಿ ನಿರ್ಮಿಸಲಾಗಿದೆ. ಭಾವಣಿಗೆ ಏರಲು ಸಹಾಯವಾಗುವಂತೆ

ಪಾವಟಿಗೆಗಳಿವೆ. ಆರೂ ಗುಮ್ಮಟಗಳ ಮೇಲೆ ತೆರೆದ ಪ್ರದೇಶವಿದ್ದು ಅದನ್ನು ಧಾನ್ಯ ತುಂಬಲು ಬಳಸಲಾಗುತ್ತಿತ್ತೆಂದು ಭಾವಿಸಲಾಗಿದೆ. ದೇವಾಲಯದ ಪೂರ್ವದ ಪ್ರವೇಶ ದ್ವಾರದಿಂದ ತುಸು ದೂರದಲ್ಲಿರುವ ಕಲ್ಲಿನ ಮೆಟ್ಟಿಲುಗಳು 500 ಮೀಟರ್‌ಗೂ ಉದ್ದವಾಗಿರುವ ಕೃಷ್ಣಾ ಬಜಾರಿಗೆ ಕರೆದೊಯ್ಯುತ್ತದೆ. ಈ ಬಜಾರ್ ನ ಇಕ್ಕೆಲಗಳಲ್ಲಿ ಸಾಲು ಮಂಟಪಗಳಿವೆ. ದೇವಾಲಯದಿಂದ 200ಮೀಟರ್ ದೂರದಲ್ಲಿ ಮಂಟಪಗಳ ಎತ್ತರ ದಿಕ್ಕಿನಲ್ಲಿ ಲೋಕಪಾವನಿ ಪುಷ್ಕರಣಿಯಿದೆ. ಇದು ಮಂಟಪಗಳಿಂದ ಸುತ್ತುವರಿದ ರಚನೆಯಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಪ್ರವೇಶದ್ವಾರವನ್ನು ಹೊಂದಿದೆ. ಪುಷ್ಕರಣಿಯ ಮಧ್ಯಭಾಗದಲ್ಲಿ ಒಂದು ಮಂಟಪವಿದೆ. ಅಲ್ಲದೆ ಈ ಮಂಟಪದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಶಿಖರವಿದೆ.

ದೇವಾಲಯದ ಪ್ರವೇಶದ್ವಾರದ ಬಳಿ ಇರುವ ಗೋಡೆ ಕಂಬಗಳಲ್ಲಿ ಗಂಗಾ ಜಮುನೆಯರು ಲತೆಯನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಕಣ್ಮನ ಸೆಳೆಯುವ ಗಾರೆ ಗೊಂಬೆಗಳನ್ನು ಶಿಲ್ಪಿಗಳು ನಿರ್ಮಿಸಿದ್ದಾರೆ. ಇಲ್ಲಿ ಗೋಪಿಯು ಗೋಪಿಯರ ಸೀರೆಯನ್ನು ಸೆಳೆಯುವ ಗಾರೆ ಗೊಂಬೆಗಳು ಹಾಗೂ ಉದರಗಿರಿಯನ್ನು ಕೃಷ್ಣದೇವರಾಯನು ವಶಪಡಿಸಿಕೊಂಡ ಗಾರೆ ಚಿತ್ರಗಳಿವೆ. ಪೂರ್ವ ಉತ್ತರ ಮತ್ತು ದಕ್ಷಿಣ ಮುಖಗಳಲ್ಲಿ ಕೃಷ್ಣಲೀಲೆಗಳಿಗೆ ಸಂಬಂಧಿಸಿದ ಗಾರೆ ಶಿಲ್ಪಗಳಿವೆ. ಪಶ್ಚಿಮ ಮುಖದಲ್ಲಿ ಉದರಗಿರಿ ಯುದ್ಧದಲ್ಲಿ ಪಾಲ್ಗೊಂಡ ಸೈನ್ಯದ ವಿಜಯೋತ್ಸವವನ್ನು ನಿರೂಪಿಸುವ ಗುಂಪು ಶಿಲ್ಪಗಳನ್ನು ರಚಿಸಲಾಗಿದೆ.

ಗೋಪುರದ ಪೂರ್ವ ಮುಖದ ಮೊದಲ ಹಂತದಲ್ಲಿ ಕೃಷ್ಣನು ತನ್ನ ಬಲಗೈಯಲ್ಲಿ ಗೋವರ್ಧನ ಗಿರಿಯನ್ನು ಎತ್ತಿ ಹಿಡಿಯುವ ಶಿಲ್ಪವು ಸೊಗಸಾಗಿ ಮೂಡಿ ಬಂದಿದೆ. ಇದೇ ಮುಖದ ಮೊದಲನೆ ಮತ್ತು ಎರಡನೆ ಹಂತಗಳಲ್ಲಿ ಆಳೆತ್ತರದ ದ್ವಾರಪಾಲಕರ ಶಿಲ್ಪಗಳುಂಟು ಸುಮಾರು ಸುಸ್ಥಿತಿಯಲ್ಲಿರುವ ಇವು ವಿಜಯನಗರ ಕಾಲದ ಗಾರೆಶಿಲ್ಪಗಳ ಅಧ್ಯಯನಕ್ಕೆ ಅತ್ಯುತ್ತಮ ಮಾದರಿಗಳು. ಇದೇ ಗೋಪುರದ ದಕ್ಷಿಣ ಮುಖದಲ್ಲಿ ವಸ್ತ್ರಗಳನ್ನು ಅಪಹರಿಸಿಕೊಂಡು ಮರದ ಮೇಲೆ ಕುಳಿತ ಕೃಷ್ಣ ಮತ್ತು ಕೆಳಗಡೆ ವಸ್ತ್ರಗಳ ನಿರೀಕ್ಷೆಯಲ್ಲಿರುವ ನಗ್ನ ಸ್ತ್ರಿಯರ ಪ್ರತಿಮೆಗಳಲ್ಲಿ ಶಿಲ್ಪಿಯು ಜೀವಂತಿಕೆಯನ್ನು ತುಂಬಿದ್ದಾನೆ. ಸ್ತ್ರೀಯರ ಅಂಗಾಂಗಗಳನ್ನು ವಿವರ ಸಹಿತ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಇವು ಶಿಲ್ಪಿಯ ಆಸಕ್ತಿ ಮತ್ತು ಕಾರ್ಯ ಮಗ್ನತೆಯನ್ನು ಸೂಚಿಸುವುದರ ಜೊತೆಗೆ ಕಾವ್ಯದ ಕನಸನ್ನು ಸಾಕಾರಗೊಳಿಸುವಲ್ಲಿ ಅವನಲ್ಲಿದ್ದ ಸೌಂದರ್ಯ ದೃಷ್ಟಿ ಹಾಗೂ ಪರಿಣತಿಗಳನ್ನು ಪರಿಚಯಿಸುತ್ತವೆ. ಸಾಮಾನ್ಯ ನೋಡುಗನನ್ನು ಸಹ ವಿಸ್ಮಯಗೊಳಿಸುವ ಸಾಮರ್ಥ್ಯ ಇಲ್ಲಿನ ಶಿಲ್ಪಗಳಿಗುಂಟು.

ಇದೇ ದೇವಾಲಯದ ಉತ್ತರ ದ್ವಾರದ ಗೋಪುರದಲ್ಲಿ ಕೆಲವು ಶಿಲ್ಪಗಳಿವೆ. ಮುಖಮಂಟಪದ ಈಶಾನ್ಯ ಮೂಲೆಯಲ್ಲಿರುವ ಬಿಡಿ ಕೊಠಡಿಯ ಮೇಲೆ ಏಕತಲ ಶಿಖರವಿದ್ದು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ವಿಷ್ಣು ಗರುಡ ಮತ್ತು ಕೀರ್ತಿ ಮುಖಗಳ ಅಲಂಕರಣವುಂಟು ಆವರಣದಲ್ಲಿರುವ ಅಮ್ಮನವರ ಗುಡಿ ಹಾಗೂ ಇದಕ್ಕೆ ಹೊಂದಿಕೊಂಡು ದಕ್ಷಿಣಾಭಿಮುಖವಾಗಿರುವ ಕೊಠಡಿಯ ಮೇಲೆ ಶಿಖರಗಳಿವೆ. ಈ ಶಿಖರಗಳಲ್ಲಿ ವಿಷ್ಣು ಕಾಳಿಂಗಮರ್ಧನ ಕೃಷ್ಣ, ಲಕ್ಷ್ಮಿ ಮುಂತಾದ ಶಿಲ್ಪಗಳನ್ನು ಬಿಡಿಸಲಾಗಿದೆ. ಕೃಷ ದೇವಾಲಯದ ಮೇಲಿರುವ ಶಿಖರದಲ್ಲಿ ನರಸಿಂಹ ಮತ್ತು ನಾರಾಯಣ ಶಿಲ್ಪಗಳು ಕಂಡು ಬರುತ್ತವೆ.

ಆವರಣದ ನೈಋತ್ಯ ಮೂಲೆಯಲ್ಲಿರುವ ಬಿಡಿ ಕೊಠಡಿ ಮತ್ತು ದಕ್ಷಿಣ ಭಾಗದ ಬಿಡಿ ಕೊಠಡಿಗಳ ಮೇಲಿರುವ ಶಿಖರಗಳಲ್ಲಿ ಬ್ರಹ್ಮನ ಪ್ರತಿಮೆಗಳುಂಟು ಈ ಎಲ್ಲಾ ಗಾರೆಶಿಲ್ಪಗಳು ಶೈಲಿ ಮತ್ತು ಆಲಂಕರಣಗಳಲ್ಲಿ ವಿರೂಪಾಕ್ಷ ದೇವಾಲಯ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಸೈವ ಪ್ರತಿಮೆಗಳಿಗಿಂತ ಮೊದಲು ನಿರ್ಮಾಣಗೊಂಡಂತೆ ಕಂಡು ಬರುತ್ತದೆ. ಕೃಷ್ಣ ದೇವಾಲಾಯವು ಕೃಷ್ಣ ದೇವರಾಯನ ಕಾಲದಲ್ಲಿ ನಿರ್ಮಾಣಗೊಂಡಿದ್ದು ಜೊತೆಯಲ್ಲೇ ಗಾರೆಶಿಲ್ಪಗಳ ರಚನೆ ನಡೆದಿರುವುದು ಸುಸ್ಪಷ್ಟ.

**ಉಪಸಂಹಾರ**

ಒಟ್ಟಾರೆ ಗಾರೆಶಿಲ್ಪಗಳು ಸಮಭಂಗಿಯಲ್ಲಿ ರಚನೆಗೊಂಡಿದ್ದು, ಇದು ಆ ಕಾಲದ ಗಾರೆಶಿಲ್ಪಗಳ ಪ್ರಮುಖ ಲಕ್ಷಣ. ಶಿಲಾ ಶಿಲ್ಪಗಳಿಗಿಂತ ಹೆಚ್ಚಿನ ಅಲಂಕರಣವನ್ನು ಗಾರೆಶಿಲ್ಪಗಳಲ್ಲಿ ಕಾಣುತ್ತೇವೆ. ಗೂಡುಗಳ ಹೊರಗಿರುವ ಪರಿವಾರ ದೇವತೆಗಳು, ದ್ವಾರಪಾಲಕರು, ಸಂಗೀತವಾದಕರು, ನೃತ್ಯಗಾರರ, ಭಕ್ತರು, ಶಿಷ್ಯರು ಮತ್ತು ಸ್ತ್ರೀ ಪರಿವಾರದವರ ಗಾರೆಶಿಲ್ಪಗಳು ರಚನೆಯಲ್ಲಿ ದೇವತಾ ಶಿಲ್ಪಗಳಿಗಿಂತ ಸ್ವಲ್ಪ ಭಿನ್ನವಾಗಿದ್ದು ದೇವಾಲಯದ ಅಂದವನ್ನು ಹೆಚ್ಚಿಸಿವೆ. ವಿವಿಧ ಕಾರಣಗಳಿಂದ ಹಾನಿಗೊಳಗಾಗಿದ್ದು ಈ ದೇವಲಾಯವನ್ನು ಪುರಾತತ್ವ ಇಲಾಖೆಯವರು ಬೀಳುತ್ತಿರುವ ಭಾಗಗಳಿಗೆ ಆಧಾರ ಸ್ತಂಭಗಳನ್ನು ನಿರ್ಮಿಸಿ ರಕ್ಷಿಸುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಕುಂದೂರಿ ಈಶ್ವರ ದತ್ತು (ಮೂ.); ಗುರುಮೂರ್ತಿ ಪಂಡಕೂರು (ಅನು.) (2010). ಭಗ್ನ ವಿಜಯನಗರ ಚರಿತ್ರೆ. ಪ್ರಸಾರಾಂಗ ಕನ್ನಡವಿಶ್ವವಿದ್ಯಾಲಯ, ಹಂಪಿ. ಪು.101.
- ಪರಮೇಶ್ವರಪ್ಪ. ಟಿ (ಸಂ.) (1996). ಹಂಪಿ ಪರಂಪರೆ. ಅಪೂರ್ವ ಆಫಸ್‌ಟ್ ಪ್ರಿಂಟರ್ಸ ಹೋಸಪೇಟೆ. – ಪು.14.
- ಮಹದೇವ. ಸಿ. (2004). ವಿಜಯನಗರದ ಗಾರೆ ಶಿಲ್ಪ. ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ. ಪು.19, 20.
- ಮುರಿಗೆಪ್ಪ ಎ. (ಪ್ರ. ಸಂ); ಪರಮಶಿವಮೂರ್ತಿ ಡಿ.ವಿ ಮತ್ತು ಇತರರು (ಸಂ.) (2008). ಕೃಷ್ಣದೇವರಾಯ: ಆಯ್ದಲೇಖನಗಳ ಸಂಪುಟ. ಪ್ರಸಾರಾಂಗ, ಕನ್ನಡ ವಿವಿ, ಹಂಪಿ. ಪು. 276–278.
- ವಿಜಯದರ್ಶನ:ಹಂಪಿ ಕಿರುವಲಯದ ಸ್ಮಾರಕಗಳು. (2016) ಭಾರತೀಯ ಪುರಾತತ್ವ ಸರ್ವೇಕ್ಷಣ, ಹಂಪಿ. ಪು.72, 73.